# www.karunaduexams.com

## ಸಾಮಾನ್ಯ ಜ್ಞಾನ ಮತ್ತು ಪ್ರಚಲಿತ ವಿದ್ಯಮಾನ ಕ್ವಿಜ್-

ಡಿಸೆಂಬರ್,28,2017

www.karunaduexams.com

1. ಕೇಂದ್ರ ಸರ್ಕಾರದ ಯಾವ ಸಚಿವರು ಜಾನುವರು ರೋಗದ ಮುನ್ನೆಚ್ಚರಿಕೆ (LDE ) ಮೊಬೈಲ್ ಅಪ್ಲಿಕೇಷನನ್ನು ಪ್ರಾರಂಭಿಸಿದರು?
ಅ) ನರೇಂದ್ರ ಮೋದಿ
ಆ) ರಾಧಾ ಮೋಹನ್ ಸಿಂಗ್
ಇ) ರಾಜ್ನಾಥ್ ಸಿಂಗ್
ಈ) ನರೇಂದ್ರ ಸಿಂಗ್ ತೋಮರ್
ರಾಧಾ ಮೋಹನ್ ಸಿಂಗ್
ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಮಂತ್ರಿ ರಾಧಾ ಮೋಹನ್ ಸಿಂಗ್ ಅವರು ದೆಹಲಿಯಲ್ಲಿ ಜಾನುವಾರು ರೋಗ ಮುನ್ನೆಚ್ಚರಿಕೆ-ಮೊಬೈಲ್ ಅಪ್ಲಿಕೇಶನ್ Livestock Disease Forewarning (LDF) ಅನ್ನು ಪ್ರಾರಂಭಿಸಿದ್ದಾರೆ.

2. ಪ್ರತಿಷ್ಠಿತ 2017 ರ ಹರಿಹರಾಸನಮ್ ಪ್ರಶಸ್ತಿಗೆ ಯಾರನ್ನು ಆಯ್ಕೆ ಮಾಡಲಾಗಿದೆ?
ಅ) ಕೆ ಜೆ ಯೆಸುದಾಸ
ಆ) ಎಸ್ ಪಿ ಬಾಲಸುಬ್ರಮಣ್ಯಂ
ಇ) ಕೆ ಎಸ್ ಚಿತ್ರಾ
ಈ) ಎಂ ಜಯಚಂದ್ರ
ಕೆ ಎಸ್ ಚಿತ್ರಾ
ಹಿರಿಯ ಗಾಯಕಿ ಕೆ ಎಸ್ ಚಿತ್ರಾ ಅವರನ್ನು 2017 ರ ಹರಿಹರಾಸನಮ್ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಇದನ್ನು ಕೇರಳ ಸರಕಾರವು ನೀಡುವುದು ಮತ್ತು ಈ ಪ್ರಶಸ್ತಿಯು ಒಂದು ಲಕ್ಷ ರೂಪಾಯಿಯನ್ನು ಒಳಗೊಂಡಿದೆ.

3. ಅನಿಸಾ ಸಯ್ಯದ್ ಅವರು 61 ನೇ ರಾಷ್ಟ್ರೀಯ ಶೂಟಿಂಗ್ ಚಾಂಪಿಯನ್ಶಿಪ್ನಲ್ಲಿ (NSCC-2017) ಮಹಿಳಾ 25 ಮಿ ಪಿಸ್ತೂಲ್ನಲ್ಲಿ ಚಿನ್ನದ ಪದಕವನ್ನು ಗೆದ್ದರು. ಅವರು ಈ ಕೆಳಗಿನ ಯಾವ ರಾಜ್ಯದವರು?
ಅ) ಕೇರಳ
ಆ) ಪಂಜಾಬ
ಇ) ಉತ್ತರ ಪ್ರದೇಶ
ಈ) ಹರಿಯಾಣ
ಹರಿಯಾಣ
ಹರಿಯಾಣದ ಅನುಭವಿ ಶೂಟರ್ ಅನಿಸಾ ಸಯ್ಯದ್ 2017ರ ಡಿಸೆಂಬರ್ 27 ರಂದು ಕೇರಳದ ತಿರುವನಂತಪುರಂನಲ್ಲಿ ನಡೆದ 61 ನೇ ರಾಷ್ಟ್ರೀಯ ಶೂಟಿಂಗ್ ಚಾಂಪಿಯನ್ಶಿಪ್ನಲ್ಲಿ (NSCC-2017) ಮಹಿಳಾ 25 ಮಿ ಪಿಸ್ತೂಲ್ನಲ್ಲಿ ಚಿನ್ನದ ಪದಕವನ್ನು ಗೆದ್ದುಕೊಂಡರು.

www.karunaduexams.com

4. ಇತ್ತೀಚೆಗೆ ನಿಧನರಾದ ರಾಬಿ ಮಾಲಿಂಗ ಅವರು ಯಾವ ದೇಶದ ಪ್ರಸಿದ್ಧ ಸಂಗೀತಗಾರರು?
   ಅ) ಫ್ರಾನ್ಸ್
   ಆ) ಇಗ್ಲೆಂಡ್
   ಇ) ದಕ್ಷಿಣ ಆಫ್ರಿಕಾ
   ಈ) ಜರ್ಮನಿ
   ದಕ್ಷಿಣ ಆಫ್ರಿಕಾ
   ಪ್ರಸಿದ್ಧ ದಕ್ಷಿಣ ಆಫ್ರಿಕಾದ ಸಂಗೀತಗಾರ, ರಾಬಿ ಮಾಲಿಂಗ ಅವರು ಡಿಸೆಂಬರ್ 25, 2017 ರಂದು ನಿಧನ ಹೊಂದಿದರು. 'ಸೊಬಾಬಿಲಿ', 'ಮಿಥಾಡಾ' ಮತ್ತು 'ಬೇಬಿ ಪ್ಲೀಸ್' ಮುಂತಾದವು ಅವರ ಯಶಸ್ವಿ ಗೀತೆಗಳು.

5. 2017 ರ ಪೀಟಾದ (PETA's) ವರ್ಷದ ವ್ಯಕ್ತಿ ಈ ಕೆಳಗಿನವರಲ್ಲಿ ಯಾರು?
   ಅ) ಆರ್ ಮಾಧವನ್
   ಆ) ಅನುಷ್ಕಾ ಶರ್ಮಾ
   ಇ) ಜಾಕ್ವೆಲಿನ್ ಫೆರ್ನಾಂಡಿಸ್
   ಈ) ಕಪಿಲ್ ಶರ್ಮಾ
   ಅನುಷ್ಕಾ ಶರ್ಮಾ
   ಬಾಲಿವುಡ್ ನಟಿ ಅನುಷ್ಕಾ ಶರ್ಮಾ ಅವರನ್ನು 2017 ರ ಪೀಟಾದ (PETA's) ವರ್ಷದ ವ್ಯಕ್ತಿ ಎಂದು ಹೆಸರಿಸಲಾಗಿದೆ. ಪಟಾಕಿಗಳಿಂದ ನಾಯಿಗಳನ್ನು ರಕ್ಷಿಸಲು ಬಾಲಿವುಡ್ ನಟಿ ಅನುಷ್ಕಾ ಶರ್ಮಾ ತೋರಿದ ಪ್ರಯತ್ನಕ್ಕೆ, ಪ್ರಾಣಿ ಹಕ್ಕುಗಳ ಸಂಘಟನೆ ಪೀಪಲ್ ಫಾರ್ ಎಥಿಕಲ್ ಟ್ರೀಟ್ಮೆಂಟ್ ಆಫ್ ನಿಮಲ್ಸ್ (PETA) ನಿಂದ ಈ ಗೌರವವನ್ನು ನೀಡಲಾಗಿದೆ.

6. ಸಿಂಗ್ಭಮ್ ಎಲಿಫೆಂಟ್ ರಿಸರ್ವ್ (SER) ಯಾವ ರಾಜ್ಯದಲ್ಲಿದೆ?
   ಅ) ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು
   ಆ) ಕರ್ನಾಟಕ
   ಇ) ಪುದುಚೆರಿ
   ಈ) ಜಾರ್ಖಂಡ್
   ಜಾರ್ಖಂಡ್
   ಸಿಂಗ್ಭಮ್ ಎಲಿಫೆಂಟ್ ರಿಸರ್ವ್ (SER) ಪೂರ್ವ ಮತ್ತು ಪಶ್ಚಿಮ ಸಿಂಗ್ಭಮ್ ಮತ್ತು ಜಾರ್ಖಂಡ್ನ ಸರೀಕೆಲಾ-ಖರ್ಸವಾನ್ ಜಿಲ್ಲೆಗಳಲ್ಲಿದೆ ಮತ್ತು ಇದು 13,440 ಚ.ಕಿ ವಿಸ್ತೀರ್ಣವನ್ನು ಹೊಂದಿದೆ.

www.karunaduexams.com

7. 15 ನೇ ಹಣಕಾಸು ಆಯೋಗದ ಜಂಟಿ ಕಾರ್ಯದರ್ಶಿ ಹುದ್ದೆಗೆ ಯಾರನ್ನು ನೇಮಕ ಮಾಡಲಾಗಿದೆ?
   ಅ) ರಾಜೇಶ ರಂಜನ್
   ಆ) ಮುಖ್ಮೆತ್ ಸಿಂಗ್ ಭಾಟಿಯಾ
   ಇ) ಗುರುಬಚನ್ ಸಿಂಗ್
   ಈ) ಸೊಲೊಮನ್ ಯಶ್ ಕುಮಾರ್
   ಮುಖ್ಮಿತ್ ಸಿಂಗ್ ಭಾಟಿಯಾ
   1990 ರ ಬ್ಯಾಚ್ನ ಐಎಎಸ್ ಅಧಿಕಾರಿ ಮುಖ್ಮಿ ತ್ ಸಿಂಗ್ ಭಾಟಿಯಾಯವರಿಗೆ 15 ನೇ ಹಣಕಾಸು ಆಯೋಗದ ಜಂಟಿ ಕಾರ್ಯದರ್ಶಿ ಹುದ್ದೆಗೆ ನೇಮಕ ಮಾಡಲಾಗಿದೆ. ಎನ್.ಕೆ. ಸಿಂಗ್ ಅವರ ನೇತೃತ್ವದಲ್ಲಿ 15ನೇ ಹಣಕಾಸು ಕಮಿಷನ್ ರಚನೆಯಾಯಿತು.

8. ಸೀರಿಯಸ್ ಫ್ರಾಡ್ ಇನ್ವೆಸ್ಟಿಗೇಷನ್ ಆಫೀಸ್ (SFIO) ನ ಹೊಸ ನಿರ್ದೇಶಕರು ಯಾರು?
   ಅ) ನರೇಶ್ ಚಂದ್ರ
   ಆ) ನೀರಾಜ್ ಗುಪ್ತಾ
   ಇ) ಅಮರ್ದೀಪ್ ಸಿಂಗ್ ಭಾಟಿಯಾ
   ಈ) ಸುಧೀರ್ ಗಾರ್ಗ್
   ಅಮರ್ದೀಪ್ ಸಿಂಗ್ ಭಾಟಿಯಾ
   1993 ರ ಬ್ಯಾಚ್ನ ಐಎಎಸ್ ಅಧಿಕಾರಿ ಅಮರ್ದೀಪ್ ಸಿಂಗ್ ಭಾಟಿಯಾ ಸೀರಿಯಸ್ ಫ್ರಾಡ್ ಇನ್ವೆಸ್ಟಿಗೇಷನ್ ಆಫೀಸ್ (SFIO) ನ ಹೊಸ ನಿರ್ದೇಶಕರಾದರು.

9. ಪ್ರಧಾನಿ ಆರ್ಥಿಕ ಸಲಹಾ ಮಂಡಳಿಯಲ್ಲಿ ಜಂಟಿ ಕಾರ್ಯದರ್ಶಿಯಾಗಿ ನೇಮಕಗೊಂಡವರು ಯಾರು?
   ಅ) ಆಶಿಶ್ ಉಪಾಧ್ಯಾಯ
   ಆ) ಸುಮಿತ ಮಿಶ್ರಾ
   ಇ) ಅಮಿತ್ ಮೆಹ್ತಾ
   ಈ) ಮುಖ್ಮಿತ್ ಸಿಂಗ್ ಭಾಟಿಯಾ
   ಸುಮಿತ ಮಿಶ್ರಾ
   1990 ಬ್ಯಾಚ್‌ನ ಐಎಎಸ್ ಅಧಿಕಾರಿಯಾಗಿದ್ದ ಸುಮಿತ ಮಿಶ್ರಾ ಅವರು ಐದು ವರ್ಷಗಳ ಕಾಲ ಪ್ರಧಾನ ಮಂತ್ರಿ ಆರ್ಥಿಕ ಸಲಹಾ ಮಂಡಳಿಯಲ್ಲಿ ಜಂಟಿ ಕಾರ್ಯದರ್ಶಿಯಾಗಿ ನೇಮಕಗೊಂಡಿದ್ದಾರೆ.

10. ನಾಂಗ್ಖ್ಯಲ್ಲೆಮ್ ವನ್ಯಜೀವಿ ಧಾಮ (NWS) ಯಾವ ರಾಜ್ಯದಲ್ಲಿದೆ?
   ಅ) ಸಿಕ್ಕಿಂ
   ಆ) ಅರುಣಾಚಲ ಪ್ರದೇಶ
   ಇ) ಮೇಘಾಲಯ
   ಈ) ಮಣಿಪುರ
   ಮೇಘಾಲಯ

www.karunaduexams.com

ನಾಂಗ್ಖ್ಯಲ್ಲೆಮ್ ವನ್ಯಜೀವಿ ಧಾಮ (NWS) ಮೇಘಾಲಯದ ರಿ ಭೋಯ್ ಜಿಲ್ಲೆಯ ಲೈಲಾದ್ ಹಳ್ಳಿಗೆ ಸಮೀಪದಲ್ಲಿದೆ ಮತ್ತು 29 ಚ.ಕಿ ವಿಸ್ತೀರ್ಣವನ್ನು ಹೊಂದಿದೆ. ಇಲ್ಲಿರುವ ಪ್ರಾಣಿಗಳೆಂದರೆ ಬಂಗಾಳ ಹುಲಿ, ಕಪ್ಪು ಕರಡಿ, ಚಿರತೆ ಮತ್ತು ಅನೇಕ ರೀತಿಯ ಪಕ್ಷಿಗಳು.

www.karunaduexams.com